ದಿನಾಂಕ: 20.03.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ 11, 12(ಎ) ರವರ ಪರ ಶ್ರೀ ಎಸ್ ಜೆ ವಕೀಲರಿಂದಃ**

ಗೊಲ್ಲಳ್ಳಿ ಈರಜ್ಜನಿಗೆ ಒಬ್ಬರೇ ಹೆಂಡತಿ ಲಕ್ಕಮ್ಮ ಮೂರು ಜನ ಗಂಡು ಮಕ್ಕಳು. ಅವರ ಹೆಸರು ಈರಜ್ಜ, ಕದುರಜ್ಜ ಮತ್ತು ಕೊರಮಜ್ಜ. ಈರಪ್ಪ, ಕದುರಪ್ಪ ಮತ್ತು ಕೊರಮಜ್ಜನ ಮಧ್ಯೆ 1933 ರಲ್ಲಿ ವಿಭಾಗವಾಗಿರುತ್ತದೆ. ಆ ಬಗ್ಗೆ ಬರವಣಿಗೆಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈರಪ್ಪ, ಕದುರಪ್ಪ ಮತ್ತು ಕೊರಮಜ್ಜನ ಮಧ್ಯೆ ವಿಭಾಗವಾದ ಬಗ್ಗೆ ದಾಖಲೆ ಇದೆ . ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಕದುರಪ್ಪನಿಗೆ ಇಬ್ಬರು ಹೆಂಡತಿಯರು ಅವರ ಹೆಸರು ರಂಗಮ್ಮ ಮತ್ತು ಹನುಮಕ್ಕ. ರಂಗಮ್ಮನಿಗೆ ಒಬ್ಬನೇ ಮಗ ಅವರ ಹೆಸರು ಕದುರುಪ್ಪ. 11 ನೇ ಪ್ರತಿವಾದಿಯ ತಂದೆಯೇ ಕದುರಪ್ಪ. ಸದರಿ ಕದುರಪ್ಪನಿಗೆ ಸತ್ಯಪ್ಪ, ಚಂದ್ರಪ್ಪ, ತಿಪ್ಪೀರಮ್ಮ ಎನ್ನುವ ಮೂರು ಜನ ಮಕ್ಕಳು. ಕದುರಪ್ಪನಿಗೆ ರಂಗಸ್ವಾಮಿ ಎನ್ನುವ ಮಗನಿದ್ದ ಎಂದರೆ ಗೊತ್ತಿಲ್ಲ. ಅವರ ವಾರಸುದಾರರು ಯಾರು ಇದ್ದಾರೆಂದು ಗೊತ್ತಿಲ್ಲ.

12 ನೇ ಪ್ರತಿವಾದಿ ಕದುರುಪ್ಪನ ಮಗ ಎಂದು ತೋರಿಸಲು ಯಾವ ದಾಖಲೆ ಇದೆ ಎಂದು ಗೆೊತ್ತಿಲ್ಲ. ಕದುರಪ್ಪನ 2 ನೇ ಹೆಂಡತಿ ಹನುಮಕ್ಕನಿಗೆ ಇಬ್ಬರು ಮಕ್ಕಳು. ಅವರ ಹೆಸರು ಕೆ ವೀರಪ್ಪ ಮತ್ತು ಕರಿಯಪ್ಪ. ಕೆ ವೀರಪ್ಪನಿಗೆ ಯಾವುದೇ ಮಕ್ಕಳು ಇರುವುದಿಲ್ಲ. ವೈ ಕೆ ಚಂದ್ರಪ್ಪ ಕೆ ವೀರಪ್ಪನ ದತ್ತು ಮಗ ಎಂದರೆ ಸರಿಯಲ್ಲ. ಕರಿಯಪ್ಪನಿಗೆ 7 ಜನ ಮಕ್ಕಳು. ಮೂರು ಜನ ಹೆಣ್ಣು ಮಕ್ಕಳು 4 ಜನ ಗಂಡು ಮಕ್ಕಳು.

ಕೆ ವೀರಪ್ಪ, ಕರಿಯಪ್ಪ, ಸತ್ಯಪ್ಪ ಮತ್ತು ಕದುರಪ್ಪ ನ ಮಧ್ಯೆ ವಿಭಾಗವಾದ ಬಗ್ಗೆ ದಾಖಲೆ ಇದೆ. ಜುಬಾನಿ ಪಾರಿಕತ್ ಪತ್ರಗಳು ಇವೆ. ಸರ್ವೆ ನಂ.11/3 ರಲ್ಲಿ ಕೆ ವೀರಪ್ಪ, ಕರಿಯಪ್ಪ, ಸತ್ಯಪ್ಪ ಇವರಿಗೆ ತಲಾ 2 ಎಕರೆ 25 ಗುಂಟೆ ಬಂದಿರುತ್ತದೆ. ಆ ಬಗ್ಗೆ ಮ್ಯುಟೇಷನ್ ಆಗಿರುತ್ತದೆ. ಆ ಮ್ಯುಟೇಷನ್ ನ್ಯಾಯಾಲಯಕ್ಕೆ ಹಾಜರು ಪಡಿಸಿರಬಹುದು. ಕೆ ವೀರಪ್ಪ, ಕರಿಯಪ್ಪ, ಸತ್ಯಪ್ಪ ಇವರ ಹೆಸರಿಗೆ ಜಂಟಿಯಾಗಿ ಪಹಣಿ ಬರುತ್ತಿವೆ . ಪೋಡು ಆಗಿರುವುದಿಲ್ಲ. ವಿಭಾಗವಾದರೆ ಅವರ

ಹೆಸರಿನ ಮುಂದೆ ಪ್ರತ್ಯೇಕವಾಗಿ ವಿಸ್ತೀರ್ಣ ನಮೂದಾಗುತ್ತದೆ ಎಂದರೆ ಸಾಕ್ಷಿ ಆ ಪಹಣಿಗಳಲ್ಲಿ ಮಾಡಿಲ್ಲ ಎಂದು ಹೇಳುತ್ತಾರೆ. ಪೋಡಾದರೆ ಪ್ರತ್ಯೇಕ ಪಹಣಿಗಳು ಬರುತ್ತವೆ ಎಂದರೆ ನಿಜ.

ಸರ್ವೆ ನಂ.11/3 ಕೆ. ವೀರಪ್ಪ, ಕರಿಯಪ್ಪ, ಕದುರಪ್ಪ ಸತ್ಯಪ್ಪ ಇವರ ಹೆಸರಿಗೆ ಜಂಟಿ ಬರುತ್ತಿದೆ ಎಂದರೆ ನಿಜ. ಸರ್ವೆ ನಂ.11/1 ರಲ್ಲಿ 7 ಎಕರೆ 5 ಗುಂಟೆ ಇದೆ. ಅದರ ಖಾತೆ ಖರೀದಿ ಮಾಡಿರುವವರ ಹೆಸರಿಗೆ ಇದೆ. ಅದನ್ನು ಕೆ ವೀರಪ್ಪ ಮಾರಾಟ ಮಾಡಿರುತ್ತಾರೆ. ವೀರಪ್ಪ ಮಾರಿದ್ದಾರೆ ಎಂಬುದರ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಕ್ರಯ ಪತ್ರ ಹಾಜರು ಪಡಿಸಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ. ಸರ್ವೆ ನಂ.11/1 ನ್ನು ನಾನಾಗಲೀ ನನ್ನ ಮಕ್ಕಳಾಗಲಿ ಮಾರಾಟ ಮಾಡಿಲ್ಲ. ಆದರೆ ನಾವು ಹಕ್ಕು ಖುಲಾಸೆ ಮಾತ್ರ ಮಾಡಿಕೊಟ್ಟಿದ್ದೇವೆ. ಸದರಿ ಹಕ್ಕು ಖುಲಾಸೆ ಪತ್ರ ಹಾಜರುಮಾಡಿರಬಹುದು.

ದಾವಾ ಐಟಂ ನಂ.2 ಸರ್ವೆ ನಂ.3 ರ 6 ಎಕರೆ 1 ಗುಂಟೆ ಆಸ್ತಿ ಕರಿಯಮ್ಮನವರಿಂದ ಕೆ ವೀರಪ್ಪನವರಿಗೆ ವಿಲ್ ನಾಮೆ ಮೂಲಕ ಬಂದಿರುತ್ತದೆ. ದಾವಾ ಐಟಂ ನಂ.2 ಕರಿಯಮ್ಮನಿಗೆ ಅವರ ಗಂಡನಾದ ಕೊರಮಜ್ಜನಿಂದ ಬಂದಿರುತ್ತದೆ. ಅದು ಕೊರಮಜ್ಜನ ಪಿತ್ರಾರ್ಜಿತ ಆಸ್ತಿ ಅಲ್ಲ ಅದನ್ನು ಕೊರಮಜ್ಜ ಖರೀದಿಮಾಡಿರುತ್ತಾರೆ. ಕೊರಮಜ್ಜ ಖರೀದಿ ಮಾಡಿದ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ.

ದಾವಾ ಐಟಂ ನಂ.2 ರ 6 ಎಕರೆ 1 ಗುಂಟೆಯನ್ನು ಕರಿಯಮ್ಮ ವಿಲ್ ಮೂಲಕ ಕೆ ವೀರಪ್ಪನಿಗೆ ಕೊಟ್ಟಿದ್ದಾರೆ ಎಂದು ಹೇಳಿದ್ದು ಆ ವಿಲ್ ಪತ್ರವನ್ನು ಹಾಜರು ಪಡಿಸಿದ್ದೇನೆ. ದಾವಾ ಐಟಂ ನಂ.1 ಸರ್ವೆ ನಂ.11/1ರ 7 ಎಕರೆ 5 ಗುಂಟೆ ಇದ್ದು ಆ ಬಗ್ಗೆ ಪಹಣಿ ಹಾಜರು ಪಡಿಸಿದ್ದೇನೆ. ಸದರಿ ಜಮೀನು ಕೊರಮಪ್ಪನಿಂದ ಕರಿಯಮ್ಮನಿಗೆ ವಿಲ್ ಮೂಲಕ ಬಂದಿದೆ. ಸದರಿ ಆಸ್ತಿ ಕೊರಮಪ್ಪನ ಪಿತ್ರಾರ್ಜಿತ ಆಸ್ತಿ. ಕೊರಮಪ್ಪನಿಗೆ ಅವರ ತಂದೆ ಗೊಲ್ಲಳ್ಳಿ ಈರಜ್ಜನಿಂದ ಬಂದಿದೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ.

ಕೊರಮಪ್ಪನ ತಾಯಿ ಹೆಸರು ಲಕ್ಕಮ್ಮ. ಕದುರಪ್ಪನ ತಾಯಿ ಹೆಸರು ಸಹ ಲಕ್ಕಮ್ಮ ಇವರಿಬ್ಬರು ಒಂದೇ ತಂದೆ ಮಕ್ಕಳು ಎಂದರೆ ನಿಜ. ಪಿತ್ರಾರ್ಜಿತ ಆಸ್ತಿಯಲ್ಲಿ ಕೊರಮಪ್ಪ, ಕದುರಜ್ಜ, ಕೆ ವೀರಪ್ಪ ನವರು ವಿಭಾಗವಾದ ಬಗ್ಗೆ ಪ್ರತ್ಯೇಕ ಪಹಣಿಗಳು ಬಂದಿರುವುದಿಲ್ಲ. ಜಂಟಿಯಾಗಿವೆ.

ಸರ್ವೆ ನಂ.112/1 ಎ ರಲ್ಲಿ ಒಂದು ಆಸ್ತಿ 3 ಎಕರೆ 7 ಗುಂಟೆ ಮತ್ತೊಂದು 2 ಎಕರೆ 25 ಗುಂಟೆ ಇದೆ. ಸದರಿ ಜಮೀನು ವೀರಪ್ಪನ ಸ್ವಯಾರ್ಜಿತ ಆಸ್ತಿ ಆಗಿದೆ. ಯಾವಾಗ ಖರೀದಿ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಸದರಿ ಆಸ್ತಿ ಖರೀದಿ ಮಾಡುವ ಸಮಯದಲ್ಲಿ ಕೆ ವೀರಪ್ಪನಿಗೆ ಪಿತ್ರಾರ್ಜಿತ ಆಸ್ತಿಗಳು ಇದ್ದವು ಎಂದರೆ ನಿಜ. ಸದರಿ ಜಮೀನನ್ನು ಪಿತ್ರಾರ್ಜಿತ ಆಸ್ತಿಯಲ್ಲಿ ಬಂದ ದುಡಿಮೆಯಿಂದ ವೀರಪ್ಪನ ಹೆಸರನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.104/1 ಬಿ ಯ 34 ಗುಂಟೆ ಕೆ ವೀರಪ್ಪನ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ಸರ್ವೆ ನಂ.112/1 ಎ, 104/1 ಬಿ ಕೆ ವೀರಪ್ಪನ ಸ್ವಯಾರ್ಜಿತ ಆಸ್ತಿಗಳಲ್ಲ ಅವು ಪಿತ್ರಾರ್ಜಿತ ಆಸ್ತಿಯಿಂದ ಬಂದ ದುಡಿಮೆಯಿಂದ ಕೆ ವೀರಪ್ಪ ಬುದ್ದಿವಂತನಾಗಿದ್ದರಿಂದ ಅವರ ಹೆಸರಿಗೆ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಮತ್ತು ಎದುರು ಕ್ಲೈಂ ನಲ್ಲಿ ಕೆ ಸತ್ಯಪ್ಪ ಇವರಿಗೆ 2 ಎಕರೆ 25 ಗುಂಟೆ ಮಾತ್ರ ಹೋಗಿದ್ದು ಬೇರೆ ಯಾವುದೇ ಜಮೀನು ಇರುವುದಿಲ್ಲ. ಆ ಸರ್ವೆ ನಂಬರ್ ಜಂಟಿಯಾಗಿರುತ್ತದೆ. ಕೆ ವೀರಪ್ಪ ನನಗೆ ಮತ್ತು ವೈಕೆ ಲೊಕೇಶ್, ವೈಕೆ ಹೊನ್ನಪ್ಪ ಇವರಿಗೆ 28.08.1995 ರಲ್ಲಿ ವಿಲ್ ಬರೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು , ಕೆ ವೀರಪ್ಪ , ವೈಕೆ ಲೊಕೇಶ್, ವೈಕೆ ಹೊನ್ನಪ್ಪ ಇವರು 11 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ದಿಃ28.08.1995 ರ ವಿಲ್ ನಾಮೆಯನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಕೊರಮಪ್ಪ ನ ಹೆಂಡತಿ ಕರಿಯಮ್ಮ ದಿಃ23.11.1982 ರಲ್ಲಿ ಸರ್ವೆ ನಂ.11/1 ,

ಸರ್ವೆ ನಂ.3 ರ ಬಾಬ್ತು ಕೆ ವೀರಪ್ಪನಿಗೆ ವಿಲ್ ಬರೆದಿಲ್ಲ ಎಂದರೆ ಸರಿಯಲ್ಲ. ಕರಿಯಮ್ಮನಿಗೆ ಸರ್ವೆ ನಂ.11/1 , ಸರ್ವೆ ನಂ.3 ನ್ನು ವಿಲ್ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಅವರ ಗಂಡ ಕೊರಮಪ್ಪನಿಗೂ ಆ ಆಸ್ತಿಯಲ್ಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾನು, ಕರಿಯಮ್ಮ , ಕೆ ವೀರಪ್ಪ ಎಲ್ಲರೂ ಶರೀಕಾಗಿ ಪ್ರತಿವಾದಿ 11 ರವರಿಗೆ ಮೋಸ ಮಾಡುವ ಉದ್ದೇಶದಿಂದ ವಿಲ್ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ವಿಲ್ ಆಧಾರದ ಮೇಲೆ ನಮಗೆ ಯಾವುದೇ ಹಕ್ಕು ಸ್ವಾದೀನ ಇಲ್ಲ ಎಂದರೆ ಸರಿಯಲ್ಲ.

ಕೆ ವೀರಪ್ಪನಿಂದ ವಿಲ್ ಮೂಲಕ ನಮಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿರುವುದಿಲ್ಲ. ನಮಗೆ ಪಿತ್ರಾರ್ಜಿತವಾಗಿ ಬಂದ ಒಟ್ಟು ಮೂರು ಮನೆಗಳು ಇವೆ. ಅವುಗಳನ್ನು ಹಂಚಿಕೆ ಮಾಡಿಕೊಂಡಿಲ್ಲ. ನಾನು ವಿಲ್ ಸೃಷ್ಟಿ ಮಾಡಿಕೊಂಡು ಹನುಮಪ್ಪ, ವೀರಪ್ಪ, ಕದುರಪ್ಪ ವಿಭಾಗ ಮಾಡಿಕೊಳ್ಳದಿದ್ದರೂ ಸಹ ವಿಭಾಗ ಮಾಡಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮತ್ತು ಎದುರು ಕ್ಲೈಂ ಗಳಲ್ಲಿ 11 ನೇ ಪ್ರತಿವಾದಿಗೆ 1/3 ಭಾಗ ಹಕ್ಕು ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು